# ರೈಸ್ ಪರ್ಲ್ ಆಭರಣ

**ರೈಸ್ ಪರ್ಲ್ ಆಭರಣ ಫ್ಯಾಷನ್ ಟ್ರೆಂಡ್ ಆಗಿದೆ. ಪುಟ್ಟ ಹುಡುಗಿಯರು ಜರಿಲಂಗ ಹಾಕಿಕೊಂಡು ಒಂದೇ ಒಂದು ರೈಸ್ ಪರ್ಲ್ ನೆಕ್ಲೇಸ್ ತೊಟ್ಟುಕೊಂಡರೆ ಮುದ್ದಾಗಿ ಕಾಣಿಸುತ್ತಾರೆ. ಮಹಿಳೆಯರೂ ಚೋಕರ್, ಹಾರಮ್ ರೂಪದಲ್ಲಿ ಈ ಆಭರಣ ಧರಿಸಿ ಮಿಂಚಬಹುದು.**

**■ ಕೃಷ್ಣವೇಣಿ ಪ್ರಸಾದ್ ಮುಳಿಯ**

ಚಿತ್ರಗಳು: ಮುಳಿಯ ಕೇಶವ ಭಟ್ ಅಂಡ್ ಸನ್ಸ್



ರೈಸ್ ಪರ್ಲ್ ಆಭರಣ ಫ್ಯಾಷನ್ ಲೋಕದಲ್ಲಿ ಮಿಂಚುತ್ತಿದೆ. ಮಹಿಳೆಯರನ್ನು ಬಹುವಾಗಿ ಸೆಳೆಯುತ್ತಿದೆ. ಬದುಕಿನ ಸುಂದರತೆ ಆಭರಣಗಳೊಂದಿಗೆ, ಸಂಸಾರದೊಂದಿಗೆ, ಪರಸರದೊಂದಿಗೆ, ಆರೋಗ್ಯದೊಂದಿಗೆ. ತಿಳಿದೋ ತಿಳಿಯದೆಯೋ ಸೌಂದರ್ಯ ಎನ್ನುವುದು ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿದೆ.

ನಗುವ ಚೆಲ್ಲುವ ತುಟಿ ಚಂದ; ಮುತ್ತಿನ ಓಲೆ, ಒಡವೆ ಅಂದ... ಸೌಂದರ್ಯ ಮುಖದ ನಗುವಿನಲ್ಲಿ ಅಡಗಿದೆ. ಬಾಹ್ಯ ಸೌಂದರ್ಯ ಸದಾ ಸುಂದರವಾಗಿ ಇರಬೇಕಾದರೆ ಮನದ ಸೌಂದರ್ಯ ಮಧುರವಾದ ಭಾವನೆಗಳಿಂದ ಕೂಡಿರಬೇಕು. ಈ ಎರಡೂ ಜೊತೆಗಿದ್ದು ಶರೀರದಲ್ಲಿ ಆಭರಣ (ಅದ್ಭುತ ವಿನ್ಯಾಸದ), ದಿರಿಸು, ಆದಷ್ಟು ಮೇಕಪ್ ಜೊತೆಯಾದಾಗ 'ನಾನು ಒಬ್ಬ ನಾರಿ, ನನಗೂ ಬೆಲೆಯಿದೆ' ಎಂಬ ಆತ್ಮಸ್ಥೈರ್ಯ ಬರುತ್ತದೆ. ಇಂದಿನ ಯುಗದಲ್ಲಿ ವಿದ್ಯಾಭ್ಯಾಸ, ಸಂಪತ್ತು, ಆರೋಗ್ಯ ಮೂರಕ್ಕೂ ಮಹತ್ವ ಇದೆ. ಇದರ ಜೊತೆಗೆ ಸೌಂದರ್ಯವರ್ಧನೆಗೂ.

ಮಹಿಳೆಯರು ದಿರಿಸು, ಆಭರಣಕ್ಕೆ ಬಹಳ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ವ್ಯಕ್ತಿತ್ವದ ಬೆಳವಣಿಗೆಗೆ ಇದು ಸಹಾಯಕ ಎಂಬುದು ಅವರ ಭಾವನೆ. ಆಭರಣ ಎಂದಾಗ ಈಗಿನ ಟ್ರೆಂಡ್ ರೈಸ್ ಪರ್ಲ್ ಆಭರಣ. ರೈಸ್ ಪರ್ಲ್‌ನಲ್ಲಿ ವಿಶೇಷವಾಗಿ ವಿನ್ಯಾಸಗೊಳಿಸಿದ ಆಭರಣ ಜುಮ್ಕಿ, ಹಾರಮ್. ಇದು ಈಗ ಬಹು ಬೇಡಿಕೆಯ ಆಭರಣವಾಗಿದೆ. ಏಕೆಂದರೆ ಅಷ್ಟೊಂದು ಸೊಗಸಾದ ನೋಟ ಇದಕ್ಕಿದೆ. ಆಭರಣಗಳಲ್ಲಿ ಗಮನಿಸಬೇಕಾದ ಅಂಶ ಎಂದರೆ ವಿನ್ಯಾಸದಲ್ಲಿ ತುದಿಗಳು, ಆಕಾರ ಫಿನಿಶಿಂಗ್ ಸೂಕ್ಷ್ಮವಾಗಿ ಕೆತ್ತಿದ ಮುತ್ತುಗಳು ಆಭರಣದಲ್ಲಿ ಅಲಂಕೃತವಾಗಿರುವುದು.

ರೈಸ್ ಪರ್ಲ್ ಹೆಸರಿನಂತೆಯೇ ಅಕ್ಕಿಯ ತರಹ ಇದೆ. ಎರಡೂ ಬದಿ ಚೂಪಾಗಿದ್ದು, ಗೋಲು ಮುತ್ತಿಗಿಂತ ಸ್ವಲ್ಪ ವಿಭಿನ್ನವಾಗಿದ್ದು ಸಪೂರವಾಗಿ ನಾರಿಯ ಸೊಂಟದ (ಸಿಂಹಕಟಿ) ಆಕರ್ಷಣೆ ಹೇಗಿದೆಯೋ ಅದೇ ರೀತಿ ಬಹಳ ಆಕರ್ಷಕವಾದ ನೋಟವನ್ನು ಹೊಂದಿದೆ. ಆಭರಣಗಳಲ್ಲಿ ಇದನ್ನು ಬಳಸಿದಾಗ ಫಿನಿಶ್ ಅಂದವಾಗಿ ಮೂಡಿಬರುತ್ತದೆ. ವಿನ್ಯಾಸದಲ್ಲಿ